# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.531-2018** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಕೆ. ಭಾಗ್ಯಶ್ರೀ<br>ಸಿಂಧುವಳ್ಳಿಪುರ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 08-09-2023. |

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್.ಎಂ.ಎಸ್ ವಕೀಲರಿಂದಃ**

ನನ್ನ ವಿವಾಹವಾಗಿ 8 ವರ್ಷಗಳಾಗಿರುತ್ತದೆ. ನನ್ನ ವಿವಾಹವು ನಂಜನಗೂಡಿನಲ್ಲಿ ಜರುಗಿರುತ್ತದೆ. ನನ್ನ ಅತ್ತೆ-ಮಾವ ಮನೆಯಲ್ಲಿ ಇರುತ್ತಾರೆ. ನಾನು ಮತ್ತು 1 ನೇ ಪ್ರತಿವಾದಿ ಸುಮಾರು ಒಂದು ವರ್ಷಗಳ ಕಾಲ ಚೆನ್ನಾಗಿ ಇದ್ದೆವು. 1 ನೇ ಪ್ರತಿವಾದಿ ಶಾಲಾ ವಾಹನದ ಚಾಲಕನಾಗಿ ನಂಜನಗೂಡಿನಲ್ಲಿ ಕೆಲಸ ಮಾಡುತ್ತಿರುತ್ತಾರೆ. 1 ನೇ ಪ್ರತಿವಾದಿ ಯಾವ ಶಾಲೆಯಲ್ಲಿ ವಾಹನದ ಚಾಲಕನಾಗಿ ಕೆಲಸ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಅತ್ತೆ ಮನೆಯಲ್ಲಿ ಒಟ್ಟು 4 ಮಂದಿ ಇದ್ದು, ಅವರುಗಳೆಂದರೆ ನನ್ನ ಗಂಡ, ಅತ್ತೆ-ಮಾವ ಮತ್ತು ನಾದಿನಿ ರವರುಗಳಾಗಿರುತ್ತಾರೆ. ನನ್ನ ನಾದಿನಿ ಮೂಕಿ ಎಂದರೆ ಸರಿ. ಆಕೆಗೆ ವಿವಾಹವಾಗಿರುವುದಿಲ್ಲ ಎಂದರೆ ಸರಿ. ನನ್ನ ಮಾವನವರಿಗೆ ಸುಮಾರು 10 ಎಕರೆ ಜಮೀನು ಇರುತ್ತದೆ. ಸದರಿ ಜಮೀನನ್ನು ಸುಮಾರು 5 ವರ್ಷಗಳ ಹಿಂದೆಯೇ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗದ ಪ್ರಕಾರ ದಾವಾ ಐಟಂ ನಂ.2 ರ ಸ್ವತ್ತನ್ನು 3 ನೇ ಪ್ರತಿವಾದಿಗೆ ನೀಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಸರ್ವೆ ನಂಬರ್ 103/4 ಮತ್ತು 105/4 ರ ಸ್ವತ್ತನ್ನು ನನ್ನ ಅತ್ತೆ ಮಾವನರಿಗೆ ವಿಭಾಗದ ಪ್ರಕಾರ ನೀಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 85/1 ರಲ್ಲಿ 1 ಎಕರೆ 18 ಗುಂಟೆ ಸ್ವತ್ತನ್ನು ನನ್ನ ಪತಿಯವರಿಗೆ ವಿಭಾಗದ ಮುಖೇನ ನೀಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

2. ನಾನು ಒಂದು ವರ್ಷಗಳ ಕಾಲ 1 ನೇ ಪ್ರತಿವಾದಿಯೊಂದಿಗೆ ಚೆನ್ನಾಗಿ ಇದ್ದು, ಆನಂತರ ಅವರಿಗೆ ತಿಳಿಸದೇ ನಾನು ಮನೆಯಿಂದ ಹೊರಬಂದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರೇ ಹಿಂಸೆ ನೀಡಿ ನನ್ನನ್ನು ಮನೆಯಿಂದ ಹೊರಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ನನ್ನ ಸಂಬಂಧಿಕರಾಗಿದ್ದರಿಂದ ಅವರುಗಳ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುವುದಿಲ್ಲ. ಪ್ರತಿವಾದಿಗಳು ನನಗೆ ಯಾವುದೇ ತೊಂದರೆ ನೀಡಿಲ್ಲವಾದ ಕಾರಣ ಅವರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಪಿರ್ಯಾದಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮನೆ ಬಿಟ್ಟು ಹೋದ ನಂತರ ಪ್ರತಿವಾದಿಗಳು ಪಂಚಾಯ್ತಿ ಸೇರಿಸಿ ನಾನು 1 ನೇ ಪ್ರತಿವಾದಿಯೊಂದಿಗೆ ಜೀವನ ನಡೆಸುವಂತೆ ತಿಳಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವೇ ಪಂಚಾಯ್ತಿ ಸೇರಿಸಿದ್ದು, ಆದರೆ 1 ನೇ ಪ್ರತಿವಾದಿ ನನ್ನೊಂದಿಗೆ ಜೀವನ ನಡೆಸಲು ಒಪ್ಪಲಿಲ್ಲ ಎಂದು ನುಡಿಯುತ್ತಾರೆ.

( ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/ –**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**